**ಸಿಸಿ ಸಂಃ 618/2014**

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಹೊಸಕೋಟೆ

| | |
|---|---|
| ಸಾಕ್ಷಿದಾರರ ಹೆಸರು : ವೆಂಕಟೇಶ್ವರಲು | ಪಿ ಡಬ್ಲ್ಯೂ - 3 ಸಿ ಡಬ್ಲ್ಯೂ -1 |
| ತಂದೆ ಹೆಸರುಃ ತಿರುಪಯ್ಯ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ: **10.07.2026** |
| ವಯಸ್ಸುಃ 36 ವರ್ಷ | |
| ವೃತ್ತಿಃ ಚಾಲಕ | |
| ವಾಸ ಸ್ಥಳಃ ಸೈದಾಪುರ ಮಂಡಲಮ್, ನೆಲ್ಲೂರು ಜಿಲ್ಲೆ. | |

**ದಿ. 10.07-2026 ಸಾಕ್ಷಿಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಬಾರದೇ ಇರುವ ಕಾರಣ ಶ್ರೀಮತಿ.ಆರ್.ಕೆ.ಎಸ್. ವಕೀಲರನ್ನು ತರ್ಜುಮೆದಾರರನ್ನಾಗಿ ಮಾಡಿ, ಅವರ ಮುಖಾಂತರ ಸಾಕ್ಷಿಯು ಪ್ರಮಾಣವಚನ ಬೋಧಿಸಲಾಯಿತು ಮತ್ತು ತರ್ಜುಮೆದಾರರಿಗೂ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನನಗೆ ಆರೋಪಿಗಳ ಪರಿಚಯ ಇರುವುದಿಲ್ಲ. ಚಾ.ಸಾ.2 ರವರ ಪರಿಚಯ ಇರುವುದಿಲ್ಲ. ಆರೋಪಿಗಳು ನಮ್ಮ ಲಾರಿಯನ್ನು ಅಡ್ಡ ಹಾಕಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಆರೋಪಿಗಳು ಕೈಯಿಂದ ಹಲ್ಲೆ ಮಾಡಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿಗಳ ವಿರುದ್ಧ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಆರೋಪಿಗಳ ವಿರುದ್ದ ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದು ದೂರು ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ದಾಖಲೆಯನ್ನು **Ex.P-2** ಎಂದು, ಸಾಕ್ಷಿಯ ಸಹಿಯನ್ನು **Ex.P-2(ಎ)** ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿರುವ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದರಿಂದ **ನಿಪಿ.1(ಬಿ)** ಎಂದು ಗುರುತಿಸಲಾಯಿತು. ಪೋಲಿಸರು ಎರಡು ಕಾಗದಗಳಿಗೆ ಸಹಿ ಮಾಡಿ ಎಂದು ಹೇಳಿದ ಕಾರಣ ನಾನು ಎರಡು ಕಾಗದಗಳಿಗೆ ನನ್ನ ಸಹಿ ಹಾಕಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ವಿಚಾರಿಸಬೇಕಾಗಿ ಎಪಿಪಿರವರು ಸಾಕ್ಷಿಯನ್ನು ವಾಟೀ ಸವಾಲು ಮಾಡಬೇಕಾಗಿ ನ್ಯಾಯಾಲಯದಲ್ಲಿ ವಿನಂತಿಸಿದ ಮೇರೆಗೆ ಅನುಮತಿಯನ್ನು ನೀಡಿರುತ್ತದೆ.)**

**<u>ವಾಟೀ ಸವಾಲುಃ ಸರ್ಕಾರದ ಪರವಾಗಿ ಎಪಿಪಿ ರವರಿಂದಃ</u>**

ದಿನಾಂಕ: 27/12/2013 ರಂದು ರಾತ್ರಿ 10-00 ಗಂಟೆಯಿಂದ 11.00 ಗಂಟೆಯ ಸಮಯದಲ್ಲಿ ಹೊಸಕೋಟೆ - ಚಿಂತಾಮಣಿ ರಸ್ತೆಯ ಬಳಿ ಶಿವನಾಪುರ ಕ್ರಾಸ್ ಬಳಿ ಆರೋಪಿಗಳು ನನ್ನನ್ನು ಮತ್ತು ಚಾ.ಸಾ.2 ರವರನ್ನು AP26 TD 2953 ಲಾರಿಯಲ್ಲಿ ಸಿಲಿಕಾನ್ ಮರಳನ್ನು ತೆಗೆದುಕೊಂಡು ಬೆಂಗಳೂರಿಗೆ ಹೋಗುತ್ತಿರುವಾಗ ಲಾರಿಯನ್ನು ಅಡ್ಡ ಹಾಕಿ ನನ್ನ ಮತ್ತು ಚಾ.ಸಾ.2 ರವರ ಮೇಲೆ ಗಲಾಟೆ ಮಾಡಿ ಬಾಯಿಗೆ ಬಂದಂತೆ ಬೈದು, ನೀವು ಸಾಗಾಣೆ ಮಾಡುತ್ತಿರುವ ಮರಳನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಲು ಬಿಡುವುದಿಲ್ಲ, ನಾವು ಹೇಳಿದ ಕಡೆ ಅನ್ ಲೋಡ್ ಮಾಡಿ ಎಂದು ಹೇಳಿದ್ದು, ಅದಕ್ಕೆ ನಾವು ಒಬ್ಬರೇ ಕಾರಣ, 1 ಮತ್ತು 2 ನೇ ಆರೋಪಿ ನನಗೆ ಕೈಯಿಂದ ಹೊಡೆದು ನೊವುಂಟು ಮಾಡಿ, 2 ಮತ್ತು 4 ನೇ ಆರೋಪಿ ನಮಗೆ ನೀವೇನಾದರೂ ಮರಳನ್ನು ಅನ್ ಲೋಡ್ ಮಾಡದೇ ಹೋದರೇ, ನಿಮ್ಮನ್ನು ಇಲ್ಲೇ ಸಾಯಿಸಿಬಿಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಮೇಲಿನಂತೆ ನಾನು ಪೋಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿ. 28.12.2013 ರಂದು ಬೆಳಿಗ್ಗೆ 9.30 ರಿಂದ 10.15 ಗಂಟೆಯವರೆಗೆ ನಾನು ತೋರಿಸಿದ ಘಟನಾ ಸ್ಥಳವಾದ ಹೊಸಕೋಟೆ - ಚಿಂತಾಮಣಿ ರಸ್ತೆಯ ಬಳಿ ಶಿವನಾಪುರ ಕ್ರಾಸ್ ಬಳಿ ನನ್ನ ಮತ್ತು ಚಾಸಾ-2 ಮತ್ತು 5 ರವರ ಸಮಕ್ಷಮ ಪಂಚನಾಮೆಯ ಕ್ರಮ ಜರುಗಿಸಿ ಬರೆದ ಪಂಚನಾಮೆಗೆ ನಾನು, ಚಾಸಾ-2 ಮತ್ತು 5 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿ: 28.12.2013 ರಂದು ನಾನು ಪೋಲೀಸರ ಮುಂದೆ ಮರುಹೇಳಿಕೆಯನ್ನು ನೀಡಿ ನನಗೆ ಆರೋಪಿಗಳು ಹೊಡೆದಿದ್ದರಿಂದ ಸಣ್ಣಪುಟ್ಟ ಪೆಟ್ಟುಗಳಾಗಿರುತ್ತವೆ ಮತ್ತು ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ, ನಾನು ದೂರು ನೀಡುವಾಗ ಸುಮಾರು 8 ರಿಂದ 10 ಜನರು ಗಲಾಟೆ

ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಆದರೆ ನಾಲ್ಕು ಜನರು ಮಾತ್ರ ನನ್ನ ಮೇಲೆ ಗಲಾಟೆ ಮಾಡಿರುತ್ತಾರೆ ಎಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿ.ಪಿ 3 ಎಂದು ಗುರುತಿಸಲಾಯಿತು. ಈಗ ನಾನು ಮತ್ತು ಆರೋಪಿಗಳು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿದ್ದರಿಂದ, ಆರೋಪಿ ಪರ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ